ಡಾ.ಬಿ.ಆರ್.ಅಂಬೇಡ್ಕರ್ ರೂ.28215.67 ಲಕ್ಷ ಅಭಿವೃದ್ಧಿ ನಿಗಮ ನಿಯಮಿತ. ಕರ್ನಾಟಕ ಪರಿಶಿಷ್ಟ ವರ್ಗಗಳ ರೂ.59.79 ಲಕ್ಷ ಅಭಿವೃದ್ಧಿ ನಿಗಮ ನಿಯಮಿತ

ಆ) ಉತ್ತರ ಪ್ರದೇಶ ಸರ್ಕಾರ ಡಿಸೆಂಬರ್, 2008ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಎಸ್.ಪಿ/ಎಸ್.ಟಿ.ಅಭಿವೃದ್ಧಿ ನಿಗಮದಿಂದ ಪಡೆದ ಸಾಲವನ್ನು ಮನ್ನಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಇ) ಹಾಗಿದ್ದಲ್ಲಿ, ಉತ್ತರ ಪ್ರದೇಶ ಸರ್ಕಾರದ ಮಾದರಿಯಲ್ಲೇ ರಾಜ್ಯ ಸರ್ಕಾರವೂ ಸಹ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಲು ಕ್ರಮ ಕೈಗೊಳ್ಳುವುದೇ?

ಪ್ರಶ್ನೆ ಉದ್ಭವಿಸುವುದಿಲ್ಲ.

(ಸಕಇ 34 ಎಸ್‌ಡಿಸಿ 2009)

ಸಹಿ/-

(ಡಿ.ಸುಧಾಕರ್)

ಸಮಾಜ ಕಲ್ಯಾಣ ಸಚಿವರು.

(ಕೆ.ಸುಬ್ಬಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ-2

ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

357 ಶ್ರೀ. ಧ್ರುವನಾರಾಯಣ.ಆರ್

ವೈದ್ಯಕೀಯ ಶಿಕ್ಷಣ ಸಚಿವರು.

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು;

10

ಆ) ಈ ಎಲ್ಲಾ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು;

1050

ಇ) ಚಾಮರಾಜನಗರ ಜಿಲ್ಲೆಯು ಅತ್ಯಂತ ಹಿಂದುಳಿದಿರುವುದರಿಂದ ಹಾಗೂ ಗಡಿ ಜಿಲ್ಲೆಯಾಗಿರುವುದರಿಂದ ಜಿಲ್ಲೆಯ ಅಭಿವದ್ಧಿ ದೃಷ್ಟಿಯಿಂದ ಸರ್ಕಾರವು ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳುವುದೇ?

ಇಲ್ಲ.

ಸಂಖ್ಯೆ: ಆಕುಕ 34 ಎಂಪಿಎಸ್ 2009

ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

359 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಪ್ರೊಡಾ:ಮುಮ್ತಾಜ್ ಅಲಿ ಖಾನ್ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿರುವ ಒಟ್ಟು ವಕ್ಫ್ ಆಸ್ತಿಗಳು ಎಷ್ಟು; ಅವುಗಳ ಸರ್ವೇ ಕಾರ್ಯವನ್ನು ಸರ್ಕಾರ ಕೈಗೊಂಡಿದೆಯೇ: ಹಾಗಿದ್ದಲ್ಲಿ, ಸರ್ವೇ ಕಾರ್ಯ ಯಾವಾಗ ಪೂರ್ಣಗೊಳ್ಳುವುದು.

ರಾಜ್ಯದಲ್ಲಿ ಒಟ್ಟು ವಕ್ಫ್ ಆಸ್ತಿಗಳು 32,224 ಇವುಗಳ ಸರ್ವೆ ಕಾರ್ಯವನ್ನು 2003ನೇ ಸಾಲಿನಲ್ಲಿ ಪ್ರಾರಂಭಿಸಿದೆ. ಇದುವರೆವಿಗೂ 20,065 ಆಸ್ತಿಗಳ ಸರ್ವೆ ಮಾಡಿದೆ. ಇನ್ನುಳಿದ 12,065 ಸರ್ವೆ ಕಾರ್ಯಕ್ಕಾಗಿ ಸರ್ಕಾರಿ ಭೂ ಮಾಪಕರೊಂದಿಗೆ ಖಾಸಗಿ ಪರ್ವಾನಗಿ ಹೊಂದಿರುವ ಭೂ ಮಾಪಕರ ಸೇವೆಯನ್ನು ಪಡೆದು ತ್ವರಿತ ಮುಕ್ತಾಯಗೊಳಿಸಲು ಕ್ರಮ ವಹಿಸಲಾಗಿದೆ. ಸ್ಪಷ್ಟವಾದ ಅವಧಿ ಹೇಳಲಾಗದು. ಆದರೆ ಬಹುಶಃ 3 ವರ್ಷಗಳಾಗಬಹುದು.

ಆ) ವಕ್ಫ್ ಆಸ್ತಿಗಳ ಅತಿಕ್ರಮೇಣಗಳನ್ನು ತೆರವುಗೊಳಿಸಲು ಸರ್ಕಾರ ವಿಶೇಷ ಕಾರ್ಯಪಡೆಯನ್ನು ರಚಿಸಿದೆಯೇ: ಹಾಗಿದ್ದಲ್ಲಿ, ಕಾರ್ಯಪಡೆಗೆ ನೀಡಲಾಗಿರುವ ಹಕ್ಕು ಬಾದ್ಯತೆಗಳ ವ್ಯಾಪ್ತಿಯ ವಿವರವನ್ನು ಒದಗಿಸುವುದು.

ಇಲ್ಲ.

ಇ) ಹಾಗಿದ್ದಲ್ಲಿ, ವಕ್ಫ್ ಆಸ್ತಿಯ ಸಂರಕ್ಷಣೆ ಮತ್ತು ಸದ್ಬಳಕೆಗಾಗಿ ಕಟ್ಟುನಿಟ್ಟಿನ ನೀತಿ ನಿಯಮಗಳನ್ನು ರೂಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಸಂಖ್ಯೆ: ಎಂಡಬ್ಲ್ಯೂಡಿ 93 ಡಬ್ಲ್ಯೂಇಎಸ್ 2009

(ಪ್ರೊಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.